## <u>ಕರ್ನಾಟಕ ಲೋಕಾಯುಕ್ತ</u>

<u>ಸಂಖ್ಯೆ:</u> ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.,-3533/2017/ಡಿ.ಆರ್.ಇ-2 ಬಹುಮಹಡಿಗಳ ಕಟ್ಟಡ,

ಡಾ: ಬಿ.ಆರ್.ಅಂಬೇಡ್ಕರ್ ವೀಧಿ,

ಬೆಂಗಳೂರು.

ದಿನಾಂಕ : 06/11/2019

### <u>ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ</u>

ವಿಷಯ: 5ನೇ ಎದುರುದಾರರ ಸಕ್ಷಮ ಪ್ರಾಧಿಕಾರದವರಿಗೆ, ಮೂಡಬಿದ್ರೆ ಪಟ್ಟಣದ ಮಹಾಯೋಜನೆಯ ವರದಿಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ. ಸುಧೀಂದ್ರ ಪ್ರಸಾದ್ ಬಿನ್ ಎಂ.ಟಿ.ನಾಯ್ಕ, ಮನೆ ನಂ. 10/170, ಮಹಾವೀರ ಕಾಲೇಜ್ ಹತ್ತಿರ, ಕೋಡಂಗಲ್ಲು, ಪ್ರಾಂತ್ಯ ಗ್ರಾಮ, ಮೂಡಬಿದ್ರೆ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ ರಾಯಪ್ಪ, ಹಿಂದಿನ ಮುಖ್ಯಾಧಿಕಾರಿಗಳು, ನಗರಸಭೆ, ಮೂಡಬಿದ್ರೆ, ಹಾಲಿ ಕಾರ್ಕಳ, ಉಡುಪಿ ಜಿಲ್ಲೆ, (2) ಶ್ರೀ ಶೀನಾ ನಾಯ್ಕ, ಮುಖ್ಯಾಧಿಕಾರಿಗಳು, ನಗರಸಭೆ, ಮೂಡಬಿದ್ರೆ, ದಕ್ಷಿಣ ಕನ್ನಡ ಜಿಲ್ಲೆ, (3) ಶ್ರೀ ಪ್ರದೀಪ್, ಹಿಂದಿನ ಸದಸ್ಯ ಕಾರ್ಯದರ್ಶಿ, ಯೋಜನಾ ಪ್ರಾಧಿಕಾರ, ಮೂಡಬಿದ್ರೆ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಹಾಲಿ ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, (4) ಶ್ರೀ ಪ್ರವೀಣ್, ಸದಸ್ಯ ಕಾರ್ಯದರ್ಶಿ, ಯೋಜನಾ ಪ್ರಾಧಿಕಾರ, ಮೂಡಬಿದ್ರೆ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಮತ್ತು, (5) ಶ್ರೀಮತಿ ರೂಪ.ಸಿ.ಕೆ., ಸದಸ್ಯ ಕಾರ್ಯದರ್ಶಿ, ಯೋಜನಾ ಪ್ರಾಧಿಕಾರ, ಮೂಡಬಿದ್ರೆ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ '1 ರಿಂದ 5ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ದೂರುದಾರರು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ನ್ನು ರಾಜ್ಯದಲ್ಲಿ ಭೂಕಬಳಿಕೆ ಮತ್ತು ಅಭಿವೃದ್ಧಿಯ ಯೋಜಿತ ಬೆಳವಣಿಗೆಯನ್ನು ವಿನಿಮಯಿಸುವುದಕ್ಕೆ ಮತ್ತು ಪಟ್ಟಣದ ಯೋಜಿತ ಕಾರ್ಯ ಯೋಜನೆಯನ್ನು ರೂಪಿಸುವುದಕ್ಕೆ ಮತ್ತು ಅದನ್ನು ಕಾರ್ಯಗೊಳಿಸುವುದಕ್ಕೆ ಏಕ ರೂಪದ ಕಾನೂನು ಹೊಂದುವುದು ಅವಶ್ಯಕವಾಗಿದೆ. ಆರ್ಥಿಕ ಯೋಜನೆಯನ್ನು ರೂಪಿಸುವುದಕ್ಕೆ ಮೊದಲು ವಾಸ್ತವಿಕ ಯೋಜನೆಯನ್ನು ರೂಪಿಸಬೇಕು, ಇಲ್ಲದಿದ್ದರೆ ನಮ್ಮ ದೇಶದ ನಗರಗಳು, ಪಟ್ಟಣಗಳು ಮತ್ತು ಹಳ್ಳಿಗಳು ಸರಿಯಾದ ಯೋಜನೆ ಇಲ್ಲದೇ, ಅವ್ಯವಸ್ಥಿತ ಪ್ರಮಾಣದಲ್ಲಿ ಬೆಳೆದು, ಅನಾರೋಗ್ಯಕರ ವಾತಾವರಣಕ್ಕೆ ಕಾರಣವಾಗುತ್ತದೆ. ಜನರು ಉತ್ತಮವಾಗಿ, ಆರೋಗ್ಯವಾಗಿ ಮತ್ತು ಉಲ್ಲಾಸದಾಯಕವಾಗಿ ವಾತವರಣದಲ್ಲಿ ಬದುಕಬೇಕಾದರೆ ವಾಸ್ತವಿಕ ಯೋಜನೆಯ ಜೊತೆಗೆ ಸುಸಂಘಟಿತ ಯೋಜನೆಯು ಅಗತ್ಯ ಎಂದು ನಿರ್ಧರಿಸಿದ ಸರ್ಕಾರ ಮೂಡಬಿದ್ರೆ ಪಟ್ಟಣಕ್ಕೆ ಯೋಜನಾ ಪ್ರಾಧಿಕಾರವನ್ನು ರೂಪಿಸಿ ಮಹಾ ಯೋಜನೆಯನ್ನು ತಯಾರಿಸಿರುವ ಇಂಗಿತವನ್ನು ಪ್ರಾಧಿಕಾರವು 21/03/2013ರಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಹೊರಡಿಸಲಾಗಿದೆ ಮತ್ತು ಮಹಾ ಯೋಜನೆಯನ್ನು ತಯಾರಿಸುವ ಇಂಗಿತವನ್ನು ಸಾರ್ವಜನಿಕವಾಗಿ ಘೋಷಿಸಲಾಗಿದೆ.

3. ಆದರೆ, ಪುರಸಭೆಗೂ ಕೌನ್ಸಿಲರಾಗಿ ಆಯ್ಕೆಯಾಗುವ ಹೆಚ್ಚಿನವರು ಭೂವ್ಯವಹಾರ, ಬಡಾವಣೆ, ವಾಣಿಜ್ಯ ಕಟ್ಟಡ ಇತ್ಯಾದಿ ವ್ಯವಹಾರಗಳಲ್ಲಿ ತೊಡಗಿಕೊಳ್ಳುವ ವ್ಯಕ್ತಿಗಳಾಗಿರುತ್ತಾರೆ. ಇವರಿಗೆ ನಗರ ಯೋಜನಾ ನೀತಿ ಜಾರಿಗೊಳಿಸುವ ಆಸಕ್ತಿ ಇಲ್ಲ ಮತ್ತು ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಹಿಂದೆಟ್ಟುಹಾಕುತ್ತಿದ್ದಾರೆ. ಆದ್ದರಿಂದ ಯೋಜನಾ ಬದ್ಧವಲ್ಲದ ಅಭಿವೃದ್ಧಿ, ಗೃಹ ನಿರ್ಮಾಣ, ನೀರು ಸರಬರಾಜು, ಸಾರಿಗೆ, ರಸ್ತೆ, ಮುಂತಾದ ಅವ್ಯವಸ್ಥೆಗಳನ್ನು ಪಟ್ಟಣದಲ್ಲಿ ಕಾಣಬಹುದಾಗಿದೆ. ಮೂಡಬಿದ್ರೆಯ ಸಾವಿರ ಕಂಬದ ಬಸದಿಯು ವಿಶ್ವ ಪರಂಪರೆ ನಿವೇಶನದ ಪುರಾತತ್ವ ಹಾಗೂ ಐತಿಹಾಸಿಕ ಸ್ಮಾರಕ ಮುಂತಾದ ಕಡೆಗಳಲ್ಲಿ ಅನಧಿಕೃತ ಕಟ್ಟಡಗಳು ಬೆಳವಣಿಗೆ ಆಗುತ್ತಿದೆ. ನೈಸರ್ಗಿಕ ಪರಿಸರ ಸಂರಕ್ಷಣೆ ಇಲ್ಲದೇ ಯದ್ವತದ್ವ ಬೆಳವಣಿಗೆಯಿಂದ ಪಟ್ಟಣದ ಮೂಲಭೂತ ಸೌಕರ್ಯಗಳಿಗೆ ಮುಂದೊಂದು ದಿನ ತೊಂದರೆಯಾಗುತ್ತದೆ.

4. ಮಂಜೂರಾದ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡವನ್ನು ನಿರ್ಮಿಸಿದರೂ ಸಹಿತ, ಎದುರುದಾರರು ಯಾವುದೇ ಕ್ರಮ ಜರುಗಿಸದೇ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಮೂಡಬಿದ್ರೆ ಪಟ್ಟಣ ಯೋಜನೆಯನ್ನು ಕಾರ್ಯಗತಗೊಳಿಸಲು ಬೃಹತ ಯೋಜನೆಯನ್ನು ತಯಾರಿಸಿ ರಾಜ್ಯ ಸರ್ಕಾರಕ್ಕೆ ಒಪ್ಪಿಸದೇ ಎದುರುದಾರರು ಕರ್ತವ್ಯ ನಿರ್ಲಕ್ಷ್ಯ ವಹಿಸಿದ್ದಾರೆ. ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿದ್ದಾರೆ.

5. 1 ರಿಂದ 5ನೇ ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ. 1 ಮತ್ತು 2ನೇ ಎದುರುದಾರರು ಕ್ರಮವಾಗಿ ಮೂಡಬಿದ್ರೆ ಪುರಸಭೆಯ ಮಾಜಿ ಮತ್ತು ಹಾಲಿ ಮುಖ್ಯಾಧಿಕಾರಿಗಳಾಗಿದ್ದು, ತಮ್ಮ ಆಕ್ಷೇಪಣೆಗಳಲ್ಲಿ ಮೂಡಬಿದ್ರೆ ಮಹಾ ಯೋಜನೆಯನ್ನು ತಯಾರಿಸಿ ಜಾರಿಗೆ ತರುವುದು ಹಾಗೂ ವಲಯ ನಿಯಮಾವಳಿಗಳನ್ನು ತಯಾರಿಸುವುದು ಮೂಡಬಿದ್ರೆ ಯೋಜನಾ ಪ್ರಾಧಿಕಾರದ ಕರ್ತವ್ಯವಾಗಿದೆ. ಸರ್ಕಾರದ ನಿರ್ದೇಶನದಂತೆ ಮಹಾ ಯೋಜನೆಯನ್ನು ತಯಾರಿಸುವ ಜವಾಬ್ದಾರಿ ತಮ್ಮ ಮೇಲೆ ಇರುವುದಿಲ್ಲ. ಆದ್ದರಿಂದ, ತಮ್ಮ ವಿರುದ್ಧ ಇರುವ ಪ್ರಕರಣವನ್ನು ಕೈಬಿಡಬೇಕೆಂದು ಕೋರಿದ್ದಾರೆ.

6. 3ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ, ಮೂಡಬಿದ್ರೆ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿದ ತರುವಾಗಯ ಈ ಯೋಜನಾ ಪ್ರದೇಶಕ್ಕೆ ಮಹಾ ಯೋಜನೆಯನ್ನು ತಯಾರಿಸಿ, ವಲಯ ನಿಯಮಾವಳಿಗಳನ್ನು ರೂಪಿಸಲು ತನ್ನ ಸೇವಾ ಅವಧಿಯಲ್ಲಿ ಹಾಲಿ ಭೂಕಬಳಿಕೆಯ ಸರ್ವೆ ಕಾರ್ಯ ನಡೆಸಿ, ಹಾಲಿ ಭೂ ಕಬಳಿಕೆಯ ನಿರ್ಧರಣಾ ದಿನಾಂಕವು ಸರ್ಕಾರದ ಅಧಿಸೂಚನೆಯಲ್ಲಿ ದಿನಾಂಕ: 22/06/2013 ರಂದು ಪ್ರಕಟಗೊಂಡಿದ್ದು, ನಂತರ ಮಹಾ ಯೋಜನೆಯನ್ನು ತಯಾರಿಸುವ ಕಾರ್ಯವನ್ನು ತಜ್ಞ ಗುತ್ತಿಗೆದಾರರಿಂದ ಪೂರೈಸಿಕೊಳ್ಳಲು ನಿಯಮಾನುಸಾರ ಟೆಂಡರ್‌ನ್ನು ಆಹ್ವಾನಿಸಿ, ಗುತ್ತಿಗೆಯನ್ನು ಸಹಾ ನೀಡಲಾಗಿರುತ್ತದೆ. ಮಹಾ ಯೋಜನೆಯನ್ನು ತಯಾರಿಸಲು ಇಂಗಿತವನ್ನು ಸಾರ್ವಜನಿಕವಾಗಿ ಪ್ರಕಟಿಸಲಾಗಿರುತ್ತದೆ. ಮೂಡಬಿದ್ರೆ ಪುರಸಭೆಯಲ್ಲಿ ನಡೆದ ಸಭೆಯಲ್ಲಿ ಸೂಕ್ತ ಮಾಹಿತಿಗಳನ್ನು ನೀಡಿ, ಈ ಕುರಿತು ಆಕ್ಷೇಪಣೆಗಳೇನಾದರೂ ಇದಲ್ಲಿ ನೀಡುವಂತೆ ಕೋರಲಾಗಿರುತ್ತದೆ. ತಾತ್ಕಾಲಿಕ ಅನುಮೋದನೆಯನ್ನು ಪಡೆಯಲು ಸಿದ್ದಪಡಿಸಲಾದ ಯೋಜನಾ ನಕ್ಷೆಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸುವ ಸಂದರ್ಭದಲ್ಲಿ ಅಂದಿನ ನಗರಾಭಿವೃದ್ಧಿ ಸಚಿವರು ಮತ್ತು ಸ್ಥಳೀಯ ಶಾಸಕರು,

ವಿಧಾನಸಭೆಯಲ್ಲಿ ಮಾನ್ಯ ಸಚಿವರ ಕೊಠಡಿಗೆ ತನ್ನನ್ನು ಮತ್ತು ನಿರ್ದೇಶಕರನ್ನು ಕರೆಸಿಕೊಂಡು ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಕೆಲವು ಗ್ರಾಮಗಳನ್ನು ಕೈಬಿಟ್ಟು ಯೋಜನಾ ಪ್ರದೇಶದ ವ್ಯಾಪ್ತಿಯನ್ನು ಮೊಟಕುಗೊಳಿಸಬೇಕೆಂದು ನಿರ್ದೇಶನ ನೀಡಿರುತ್ತಾರೆ. ಈ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಬೇಕೆಂದು ದಿನಾಂಕ: 23/07/2015 ರಂದು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರಿಗೆ ಪತ್ರ ಬರೆದಿರುತ್ತೇನೆ. ತರುವಾಯದಲ್ಲಿ ತಾನು ಅಕ್ಟೋಬರ್–2015ರಲ್ಲಿ ಮಂಗಳೂರು ಕಛೇರಿಯಿಂದ ವರ್ಗಾವಣೆಯಾಗಿದ್ದು, ತನ್ನ ಸೇವಾ ಅವಧಿಯಲ್ಲಿ ಮಹಾ ಯೋಜನೆಯನ್ನು ರೂಪಿಸುವಲ್ಲಿ ಯಾವುದೇ ಪ್ರಭಾವಕ್ಕೆ ಮಣಿದು ವಿಳಂಬವಾಗಿರುವುದಿಲ್ಲ ಎಂದು ಉಲ್ಲೇಖಿಸಿದ್ದಾರೆ.

7. 4 ಮತ್ತು 5ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, 2011ರ ಜನಗಣತಿಯಂತೆ ಮೂಡಬಿದ್ರೆ ಪುರಸಭೆ ಮತ್ತು ಹೊಂದಿಕೊಂಡಿರುವ ಗ್ರಾಮಗಳ ಭಾಗಶ: ಭಾಗಗಳ ಪ್ರದೇಶಗಳ ಜನಸಂಖ್ಯೆಯನ್ನು (39557) ಆಧಾರವಾಗಿ 2031ಕ್ಕೆ ಹೆಚ್ಚಳವಾಗಬಹುದಾದ ಜನಸಂಖ್ಯೆಯನ್ನು ವೈಜ್ಞಾನಿಕ ಪದ್ಧತಿಯಂತೆ ಲೆಕ್ಕಾಚಾರ ಮಾಡಿದಂತೆ 73176 ಆಗಬಹುದೆಂದು ಅಂದಾಜಿಸಲಾಗಿರುತ್ತದೆ. ಅದರಂತೆ ಸ್ಥಳೀಯ ಯೋಜನಾ ಪ್ರದೇಶದೊಳಗೆ ನಗರೀಕರಣ ಪ್ರದೇಶವನ್ನು ಗುರುತಿಸಿ ವಿವಿಧ ಭೂಉಪಯೋಗಗಳನ್ನು ವಿಶ್ಲೇಷಣೆಯನ್ನು ಸಮೂದಿಸಲಾಗಿರುತ್ತದೆ. ಈ ಕರಡು ನಕ್ಷೆಗಳನ್ನು ದಿನಾಂಕ: 04/09/2014 ರಂದು ಮತ್ತು 10/02/2015 ರಂದು ಕರಡು ವರದಿಯ ಸಹಿತ ಕೇಂದ್ರ ಕಛೇರಿಯ ಪರಿಶೀಲನೆಗೆ ಒಳಪಡಿಸಿದ್ದು ಇರುತ್ತದೆ. ಕೇಂದ್ರ ಕಛೇರಿಯಲ್ಲಿ ಎರಡು ಪರಿಶೀಲನಾ ಸಭೆಗಳಲ್ಲಿ ನೀಡಿದ ನಿರ್ದಶನಗಳಂತೆ ನಕ್ಷೆಗಳಲ್ಲಿ ತಿದ್ದುಪಡಿಗಳನ್ನು ಸರಿಪಡಿಸಿಕೊಂಡಿದ್ದು ಇರುತ್ತದೆ. 2031ಕ್ಕೆ ಹೆಚ್ಚಳವಾಗಬಹುದಾದ ಜನಸಂಖ್ಯೆಯನ್ನು ಆಧರಿಸಿ 1862.531 ಹೆಕ್ಟೇರ್ ಪ್ರದೇಶವನ್ನು ನಗರೀಕರಣ ಪ್ರದೇಶವೆಂದು ಗುರುತಿಸಿ ಅದರಲ್ಲಿ ಭೂಉಪಯೋಗವನ್ನು ವಿಂಗಡಿಸಲಾಗಿದ್ದು 39.28 PPH ಜನ ಸಾಂದ್ರತೆಯಂತೆ ನಗರೀಕರಣ ಪ್ರದೇಶವನ್ನು ಸೀಮಿತಗೊಳಿಸಲಾಗಿದೆ. ಅದು ಅಲ್ಲದೇ, ಪುರಸಭೆಯ ಸಭೆಗಳಲ್ಲಿ ಸದಸ್ಯರುಗಳು 50000 ಜನಸಂಖ್ಯೆಯನ್ನು ಹೆಚ್ಚಾಗಿ ಪರಿಗಣಿಸಿ ನಗರೀಕರಣ ಪ್ರದೇಶವನ್ನು ವಿಸ್ತರಿಸಬೇಕೆಂದು ಅಹವಾಲು ಸಲ್ಲಿಸಿದ್ದರು. ಎಲ್ಲಾ ಕಾರಣಗಳಿಗಾಗಿ ಸ್ಥಳೀಯ ಯೋಜನಾ ಪ್ರದೇಶದ ಗಡಿಗಳನ್ನು ಪುನರ್ ನಿಗಧಿಪಡಿಸಿದಲ್ಲಿ ಯೊಜನಾ ಪ್ರದೇಶದ ಗಡಿಯನ್ನು ನಿರ್ಬಂಧಿಸಿದಂತಾಗುತ್ತದೆ ಮುಂದೆ ಬರಬಹುದಾದ ಬೆಳವಣಿಗೆಗಳಲ್ಲಿ ಅವಕಾಶವಿಲ್ಲದಂತಾಗುವುದರ ಹಿನ್ನಲೆಯಲ್ಲಿ ಸ್ಥಳೀಯ ಯೋಜನಾ

ಪ್ರದೇಶಗಳ ಎಲ್ಲೆಗಳನ್ನು ಪುನರ್ ನಿಗಧಿಪಡಿಸುವುದಕ್ಕೆ ಮಾರ್ಗದರ್ಶನ ನೀಡಲು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರನ್ನು ದಿನಾಂಕ: 23/07/2015, 12/08/2015 ಮತ್ತು 12/05/2016 ರಂದು ಕೋರಲಾಗಿದೆ. ಮಾನ್ಯ ನಿರ್ದೇಶಕರು ದಿನಾಂಕ: 17/06/2016 ರಂದು ಉಲ್ಲೇಖ–12ರಂತೆ ನೀಡಿದ ಸೂಚನೆಯನ್ನು ಮಹಾ ಯೋಜನೆ ಸಿದ್ಧಪಡಿಸುವ ಸಲುವಾಗಿ ದಿನಾಂಕ: 23/08/2016 ರಂದು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲಾಗಿ, ಪುರಸಭೆಯ ಕೌನ್ಸಿಲ್ ಸಭೆಯು ನೀಡಿರುವ Vetting and Comments ನಲ್ಲಿ ಹಾಲಿ 2011ರ ಜನಗಣತಿಯ ಆಧಾರವನ್ನು ಗಣನೆಗೆ ತೆಗೆದುಕೊಳ್ಳಲಾಗಿದ್ದು, ಪುರಸಭೆಯ ವ್ಯಾಪ್ತಿಯಲ್ಲಿರುವ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚುವರಿಯಾಗಿ ಸೇರಿಸಿಕೊಂಡು ಮಹಾ ಯೋಜನೆಯಲ್ಲಿನ ನಗರೀಕರಣ ಪ್ರದೇಶವನ್ನು ಹೆಚ್ಚಾಗಿ ಗುರುತಿಸುವಂತೆ ನೀಡಿರುವ ಸಲಹೆಯಂತೆ ಯೋಜನಾ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಗಿ, ವಿದ್ಯಾರ್ಥಿಗಳ ಸಂಖ್ಯೆಯನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದು, ಹಾಲಿ 2011ರ ಜನ ಸಂಖ್ಯೆಯೊಂದಿಗೆ ಹೆಚ್ಚುವರಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಸೇರಿಸಿಕೊಳ್ಳುವ ಬಗ್ಗೆ ಯೋಜನಾ ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಮಾರ್ಗದರ್ಶನ ಕೋರಿ ಮಾನ್ಯ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಮೈಸೂರು ರವರಿಗೆ ದಿನಾಂಕ: 31/01/2017 ರಂದು ಪತ್ರ ಬರೆಯಲಾಗಿತ್ತು.

8. ದಿನಾಂಕ: 15/09/2017 ರಂದು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರು ನೀಡಿರುವ ನಿರ್ದೇಶನದಂತೆ ಮಹಾ ಯೋಜನೆಯನ್ನು ಸಿದ್ಧಪಡಿಸಿ ದಿನಾಂಕ: 21/12/2017 ಮತ್ತು 22/12/2017 ರಂದು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಕೇಂದ್ರ ಕಛೇರಿ, ಬೆಂಗಳೂರು ಇವರ ಪರಿಶೀಲನೆಗೆ ಒಳಪಡಿಸಲಾಯಿತು. ಪರಿಶೀಲನಾ ಸಂದರ್ಭ ಮಾನ್ಯ ನಿರ್ದೇಶಕರು ಸೂಚಿಸಿರುವ ತಿದ್ದಪಡಿಯನ್ನು ನಕ್ಷೆಯಲ್ಲಿ ಅಳವಡಿಸಿಕೊಂಡು ದಿನಾಂಕ: 16/02/2017 ರಂದು ಮತ್ತೊಮ್ಮೆ ಕೇಂದ್ರ ಕಛೇರಿಯ ಪರಿಶೀಲನೆಗೆ ಸಲ್ಲಿಸಲಾಗಿತ್ತು. ಸದರಿ ಮತ್ತೊಮ್ಮೆ ಸೂಚಿಸಿದ ತಿದ್ದುಪಡಿಗಳನ್ನು ನಕ್ಷೆಯಲ್ಲಿ ಈಗಾಗಲೇ ಅಳವಡಿಸಿಕೊಳ್ಳಲಾಗಿದ್ದು, ಮಹಾ ಯೋಜನೆಯ ವರದಿ ಹಾಗೂ ವಲಯ ನಿಯಮಾವಳಿಗಳನ್ನು ಸಿದ್ಧಪಡಿಸಲಾಗಿತ್ತು. ಸದ್ಯದಲ್ಲಿ ಮಹಾ ಯೋಜನೆಯನ್ನು ತಾತ್ಕಾಲಿಕ ಅನುಮೋದನೆಗಾಗಿ ಕೇಂದ್ರ ಕಛೇರಿಯ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲಾಗುವುದು.

9. ದಿನಾಂಕ: 02/02/2012 ರಿಂದ 20/08/2012 ರವರೆಗೆ ಹಾಗೂ ದಿನಾಂಕ: 12/04/2016 ರಿಂದ 03/03/2017 ರವರೆಗೆ ತಾನು ಕರ್ತವ್ಯ ನಿರ್ವಹಿಸಿದ್ದು, ಸದರಿ ಅವಧಿಯಲ್ಲಿ ಮೂಡಬಿದ್ರೆ ಕಛೇರಿಯಲ್ಲಿ ತನ್ನನ್ನು ಹೊರತುಪಡಿಸಿ ಬೇರೆ ಯಾವುದೇ ತಾಂತ್ರಿಕ ಸಿಬ್ಬಂದಿ ಇಲ್ಲವಾದ್ದರಿಂದ ವಾರದಲ್ಲಿ ಒಂದು ದಿನ ಅಥವಾ ಎರಡು ದಿನಗಳಲ್ಲಿ ಮೂಡಬಿದ್ರೆ ಕಛೇರಿಯ ಕೆಲಸ ನಿರ್ವಹಿಸುತ್ತಿದ್ದು, ತಾಂತ್ರಿಕ ಕಡತಗಳ ಪ್ರಕರಣವು ಹೆಚ್ಚು ಇರುವುದರಿಂದ ಕಾಲ ಮಿತಿಯೊಳಗೆ ಕಡತಗಳನ್ನು ವಿಲೇವಾರಿ ಮಾಡಬೇಕಾಗಿತ್ತು. ಹಾಗಾಗಿ ಕೆಲಸದ ಒತ್ತಡ ಹಾಗೂ ಮೂಡಬಿದ್ರೆ ಯೋಜನಾ ಪ್ರಾಧಿಕಾರ ಕಛೇರಿಯೊಂದಿಗೆ, ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು ಹಾಗೂ ದಿನಾಂಕ: 24/08/2016 ರಿಂದ 03/03/2017 ರವರೆಗೆ ಯೋಜನಾ ಪ್ರಾಧಿಕಾರ, ಬಂಟ್ವಾಳ ಕಛೇರಿಯಲ್ಲಿನ ಕೆಲಸಗಳನ್ನು ನಾನೇ ನಿರ್ವಹಿಸುತ್ತಿದ್ದ ಕಾರಣ ಹಾಗೂ ಪ್ರಾಧಿಕಾರ ಕಛೇರಿಯು ಆರಂಭವಾದ ತಕ್ಷಣ ಕಛೇರಿಯನ್ನು ನಡೆಸಲು ಸಾರ್ವಜನಿಕರಿಂದ ಭರಿಸಿಕೊಳ್ಳಲಾಗುತ್ತಿದ್ದ ಶುಲ್ಕವನ್ನೇ ಕಛೇರಿಯು ಅವಲಂಭಿತವಾಗಿದ್ದು, ಸರ್ಕಾರದಿಂದ ಯಾವುದೇ ಅನುದಾನ ಕಛೇರಿಗೆ ದೊರೆತಿರುವುದಿಲ್ಲ. ಮಹಾ ಯೋಜನಾ ಯೋಜನಾ ತಯಾರಿಕೆಗೆ ದೊಡ್ಡ ಮೊತ್ತವು ಬೇಕಾಗಿದ್ದ ಕಾರಣ, ಆರಂಭದಲ್ಲಿ ಸಾರ್ವಜನಿಕರು ಕಛೇರಿಯಿಂದ ಪಡೆಯುತ್ತಿದ್ದ ಸೇವೆಗೆ ಭರಿಸುತ್ತಿದ್ದ ಶುಲ್ಕದ ಹಣವನ್ನು ಮಹಾ ಯೋಜನಾ ತಯಾರಿಕೆಗೆ ಸಂಪನ್ಮೂಲವಾಗಿ ಕ್ರೋಢೀಕರಿಸಿಕೊಳ್ಳುವುದು ಅಗತ್ಯವಾಗಿದ್ದು. ಹಾಗಾಗಿ ಮಹಾ ಯೋಜನಾ ತಯಾರಿಕೆಗೆ ಮಾರ್ಗದರ್ಶನಗಳು ದೊರಕುವಲ್ಲಿ ವಿಳಂಬವಾಗಿರುವುದರಿಂದ, ತಾಂತ್ರಿಕ ಮತ್ತು ಆಡಳಿತಾತ್ಮಕ ಕಾರಣಗಳಿಂದಾಗಿ ಮಹಾ ಯೋಜನೆ ತಯಾರಿಕೆ ಕೆಲಸದಲ್ಲಿ ವಿಳಂಬವಾಗಿದೆ ಹೊರತಾಗಿ, ತಾನು ಯಾವುದೇ ರೀತಿಯಿಂದ ಕರ್ತವ್ಯ ನಿರ್ಲಕ್ಷಿಸಿರುವುದಿಲ್ಲ ಮತ್ತು ಪ್ರಭಾವಿಗಳ ಪ್ರಭಾವಕ್ಕೆ ಒಳಗಾಗಿರುವುದಿಲ್ಲ. ದೂರಿನಲ್ಲಿರುವ ಅಂಶಗಳು ಸತ್ಯಕ್ಕೆ ದೂರವಾಗಿವೆ. ಪ್ರಸ್ತುತ ಮಹಾ ಯೋಜನಾ ತಯಾರಿಕೆಯು ಅಂತಿಮ ಹಂತದಲ್ಲಿದ್ದು, ಮಹಾ ಯೋಜನೆ ವರದಿ ಹಾಗೂ ವಲಯ ನಿಯಮಾವಳಿಗಳನ್ನು ಸಿದ್ದಪಡಿಸಲಾಗಿದ್ದು, ಸದ್ಯದಲ್ಲಿ ಮಹಾ ಯೋಜನೆಯನ್ನು ತಾತ್ಕಾಲಿಕ ಅನುಮೋದನೆಗಾಗಿ ಕೇಂದ್ರ ಕಛೇರಿಯ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ದಾಖಲೆಗಳೊಂದಿಗೆ ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿದ್ದಾರೆ.

10. 5ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, 3 ಮತ್ತು 4ನೇ ಎದುರುದಾರರು ಉಲ್ಲೇಖಿಸಿದಂತೆ ಆಕ್ಷೇಪಣೆ ಸಲ್ಲಿಸಿದ್ದಾರೆ. ದಿನಾಂಕ: 03/03/2017 ರಿಂದ ತಾನು ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ, ಮಂಗಳೂರು ಇಲ್ಲಿ ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿದ್ದು, ಇದೇ ಕಛೇರಿಯ ತಾಂತ್ರಿಕ ಸಿಬ್ಬಂದಿ ಶ್ರೀ ಪ್ರವೀಣ್ ಇವರೊಂದಿಗೆ ವಾರದಲ್ಲಿ ಒಂದು ದಿನ ಅಥವಾ ಎರಡು ದಿನಗಳಲ್ಲಿ ಮೂಡಬಿದ್ರೆ ಕಛೇರಿಯಲ್ಲಿನ ಕೆಲಸ ನಿರ್ವಹಿಸುತ್ತಿದ್ದು, ತಾಂತ್ರಿಕ ಕಡತಗಳ ಪ್ರಕರಣವು ಹೆಚ್ಚು ಇರುವುದರಿಂದ ಕಾಲ ಮಿತಿಯೊಳಗೆ ಕಡತಗಳನ್ನು ವಿಲೇವಾರಿ ಮಾಡಬೇಕಾಗಿತ್ತು. ಹಾಗಾಗಿ ಕೆಲಸದ ಒತ್ತಡ ಹಾಗೂ ಮೂಡಬಿದ್ರೆ ಯೋಜನಾ ಪ್ರಾಧಿಕಾರ ಕಛೇರಿಯೊಂದಿಗೆ, ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು ಹಾಗೂ ದಿನಾಂಕ: 18/08/2017 ರಿಂದ 04/11/2017 ರವರೆಗೆ ಯೋಜನಾ ಪ್ರಾಧಿಕಾರ, ಬಂಟ್ವಾಳ ಕಛೇರಿಯಲ್ಲಿನ ಕೆಲಸಗಳನ್ನು ನಾನೇ ನಿರ್ವಹಿಸುತ್ತಿದ್ದ ಕಾರಣ ಹಾಗೂ ಪ್ರಾಧಿಕಾರ ಕಛೇರಿಯು ಆರಂಭವಾದ ತಕ್ಷಣ ಕಛೇರಿಯನ್ನು ನಡೆಸಲು ಸಾರ್ವಜನಿಕರಿಂದ ಭರಿಸಿಕೊಳ್ಳಲಾಗುತ್ತಿದ್ದ ಶುಲ್ಕವನ್ನೇ ಕಛೇರಿಯು ಅವಲಂಭಿತವಾಗಿದ್ದು, ಸರ್ಕಾರದಿಂದ ಯಾವುದೇ ಅನುದಾನ ಕಛೇರಿಗೆ ದೊರೆತಿರುವುದಿಲ್ಲ. ಮಹಾ ಯೋಜನಾ ಯೋಜನಾ ತಯಾರಿಕೆಗೆ ದೊಡ್ಡ ಮೊತ್ತವು ಬೇಕಾಗಿದ್ದ ಕಾರಣ, ಆರಂಭದಲ್ಲಿ ಸಾರ್ವಜನಿಕರು ಕಛೇರಿಯಿಂದ ಪಡೆಯುತ್ತಿದ್ದ ಸೇವೆಗೆ ಭರಿಸುತ್ತಿದ್ದ ಶುಲ್ಕದ ಹಣವನ್ನು ಮಹಾ ಯೋಜನಾ ತಯಾರಿಕೆಗೆ ಸಂಪನ್ಮೂಲವಾಗಿ ಕ್ರೂಢೀಕರಿಸಿಕೊಳ್ಳುವುದು ಅಗತ್ಯವಾಗಿದ್ದು. ಹಾಗಾಗಿ ಮಹಾ ಯೋಜನಾ ತಯಾರಿಕೆಗೆ ಮಾರ್ಗದರ್ಶನಗಳು ದೊರಕುವಲ್ಲಿ ವಿಳಂಬವಾಗಿರುವುದರಿಂದ, ತಾಂತ್ರಿಕ ಮತ್ತು ಆಡಳಿತಾತ್ಮಕ ಕಾರಣಗಳಿಂದಾಗಿ ಮಹಾ ಯೋಜನೆ ತಯಾರಿಕೆ ಕೆಲಸದಲ್ಲಿ ವಿಳಂಬವಾಗಿದೆ ಹೊರತಾಗಿ, ತಾನು ಯಾವುದೇ ರೀತಿಯಿಂದ ಕರ್ತವ್ಯ ನಿರ್ಲಲಕ್ಷಿಸಿರುವುದಿಲ್ಲ ಮತ್ತು ಪ್ರಭಾವಿಗಳ ಪ್ರಭಾವಕ್ಕೆ ಒಳಗಾಗಿರುವುದಿಲ್ಲ. ದೂರಿನಲ್ಲಿರುವ ಅಂಶಗಳು ಸತ್ಯಕ್ಕೆ ದೂರವಾಗಿವೆ. ಪ್ರಸ್ತುತ ಮಹಾ ಯೋಜನಾ ತಯಾರಿಕೆಯು ಅಂತಿಮ ಹಂತದಲ್ಲಿದ್ದು, ಮಹಾ ಯೋಜನೆ ವರದಿ ಹಾಗೂ ವಲಯ ನಿಯಮಾವಳಿಗಳನ್ನು ಸಿದ್ದಪಡಿಸಲಾಗಿದ್ದು, ಸದ್ಯದಲ್ಲಿ ಮಹಾ ಯೋಜನೆಯನ್ನು ತಾತ್ಕಾಲಿಕ ಅನುಮೋದನೆಗಾಗಿ ಕೇಂದ್ರ ಕಛೇರಿಯ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ದಾಖಲೆಗಳೊಂದಿಗೆ ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿದ್ದಾರೆ.

11. ಎದುರುದಾರರು ಮತ್ತು ದೂರುದಾರರು ಸಲ್ಲಿಸಿರುವ ದಾಖಲೆಗಳಿಂದ ಸಂಖ್ಯೆ: ನಅಇ 724 ಮೈಅಪ್ರಾ 2008, ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸ ಸೌಧ, ಬೆಂಗಳೂರು, ದಿನಾಂಕ: 03/01/2009ರ ಅಧಿಸೂಚನೆಯಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961ರ ಕಲಂ 4(ಎ) ರನ್ವಯ ದಕ್ಷಿಣ ಕನ್ನಡ ಜಿಲ್ಲೆ, ಮೂಡಬಿದ್ರೆ ಪಟ್ಟಣಕ್ಕೆ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

12. ಎದುರುದಾರರು ಮತ್ತು ದೂರುದಾರರು ಸಲ್ಲಿಸಿರುವ ದಾಖಲೆಗಳಿಂದ ಸಂಖ್ಯೆ: ನಅಇ 76 ಮೈಅಪ್ರಾ 2009, ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸ ಸೌಧ, ಬೆಂಗಳೂರು, ದಿನಾಂಕ: 24/02/2009ರ ಅಧಿಸೂಚನೆಯಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961ರ ಕಲಂ 4(ಸಿ)(1) ಹಾಗೂ 4(ಸಿ)(3)(i)(ii)(iii)(a) & (b) ಹಾಗೂ 4ರ ಅಡಿಯಲ್ಲಿ ಯೋಜನಾ ಪ್ರಾಧಿಕಾರದ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿ, ಸ್ಥಳೀಯ ಸಂಸ್ಥೆ ಪ್ರತಿನಿಧಿ, ಸದಸ್ಯರನ್ನು ನೇಮಕ ಮಾಡುವಂತೆ ಅಧಿಸೂಚನೆ ಹೊರಡಿಸಿದ್ದಾರೆ, ಅದರಂತೆ ಸಂಖ್ಯೆ: ಅಇ 621 ಮೈಅಪ್ರಾ 2011, ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸ ಸೌಧ, ಬೆಂಗಳೂರು, ದಿನಾಂಕ: 10/01/2012ರ ಅಧಿಸೂಚನೆಯಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961ರ ಕಲಂ 4(ಸಿ)(1) ಹಾಗೂ 4(ಸಿ)(3)(i)(ii)(iii)(a) & (b) ಹಾಗೂ 4ರ ಅಡಿಯಲ್ಲಿ ಯೋಜನಾ ಪ್ರಾಧಿಕಾರದ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿ, ಸ್ಥಳೀಯ ಸಂಸ್ಥೆ ಪ್ರತಿನಿಧಿ, ಸದಸ್ಯರನ್ನು ನೇಮಕ ಮಾಡಿ ಅಧಿಸೂಚನೆ ಹೊರಡಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ ಮತ್ತು ಕಾಲಕಾಲಕ್ಕೆ ಕೇಂದ್ರ ಕಛೇರಿಯವರಿಂದ ಹಾಗೂ ಮೂಡಬಿದ್ರೆ ಪುರಸಭೆಯ ಸದಸ್ಯರುಗಳ ಸಲಹೆ ಸೂಚನೆಯ ಅನ್ವಯ ನಡೆದುಕೊಳ್ಳುವುದಕ್ಕಾಗಿ ಹಾಗೂ ಸೂಕ್ತ ಮಾರ್ಗದರ್ಶನ ಪಡೆಯುವುದಕ್ಕಾಗಿ ಹಾಗೂ 3 ರಿಂದ 5ನೇ ಎದುರುದಾರರು ತಾವು ಆ ಸಮಯದಲ್ಲಿ ನಿರ್ವಹಿಸಿದ ಕರ್ತವ್ಯದ ಜೊತೆಗೆ ಬೇರೆ ಬೇರೆ ಕಡೆಯಿಂದ ಕರ್ತವ್ಯ ನಿರ್ವಹಿಸಿರುವುದರಿಂದ ಹಾಗೂ ಸಿಬ್ಬಂದಿಯ ಕೊರತೆ ಇರುವುದರಿಂದ, ಮಹಾ ಯೋಜನೆಯನ್ನು ತಯಾರಿಸುವಲ್ಲಿ ವಿಳಂಬವಾಗಿದೆ ಎಂಬುದು ದಾಖಲಾತಿಗಳಿಂದ ಹಾಗೂ ಆಕ್ಷೇಪಣೆಗಳಿಂದ ವಾಸ್ತವವಾಗಿದೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಮಹಾ ಯೋಜನೆಯ ತಯಾರಿಸಬೇಕಾದಲ್ಲಿ ಅದಕ್ಕೆ ಅಡ್ಡಿಯಾಗುವ ಎಲ್ಲಾ ಅಂಶಗಳನ್ನು ಹಾಗೂ ಮೇಲಾಧಿಕಾರಿಗಳಿಂದ ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನವನ್ನು ಪಡೆದು ಮಾಡಬೇಕಾಗುತ್ತದೆ. ಹೀಗಿದ್ದಾಗ, ಅಂತಹ ಯೋಜನೆಯನ್ನು ತಯಾರಿಸುವಲ್ಲಿ ಸೂಕ್ತ ಸಿಬ್ಬಂದಿಯ ಕೊರತೆ ಹಾಗೂ ಒಬ್ಬರೇ

ಅಧಿಕಾರಿಗೆ ಬೇರೆ ಪಟ್ಟಣಗಳ ಪ್ರಭಾರ ವಹಿಸಿದ್ದರಿಂದ, ಸಹಜವಾಗಿ ವಿಳಂಬ ಉಂಟಾಗುತ್ತದೆ ಎಂಬುದು ಮೇಲ್ನೋಟಕ್ಕೆ ಸತ್ಯ ಎಂದು ಕಂಡುಬರುತ್ತದೆ. ಸದರಿ ವಿಳಂಬವನ್ನು ಕರ್ತವ್ಯ ಲೋಪವೆಂದು ಅಭಿಪ್ರಾಯ ಪಡುವುದು ಸಮಂಜಸವಾಗುವುದಿಲ್ಲ.

13. ದೂರುದಾರರು ತನ್ನ ವಕೀಲರ ಮೂಲಕ ದಿನಾಂಕ: 28/01/2018 ರಂದು ವಿಜ್ಞಾಪನೆ ಮತ್ತು ಲಿಖಿತ ವಾದವನ್ನು ಸಲ್ಲಿಸಿದ್ದಾರೆ, ಅದರಲ್ಲೂ ಸಹಿತ ದೂರಿನಲ್ಲಿರುವ ಅಂಶಗಳನ್ನೇ ಪುನರುಚ್ಚರಿಸಿದ್ದಾರೆ. ಮಹಾ ಯೋಜನೆಯು ತಯಾರಾಗದೇ ಇರುವುದರಿಂದ, ಆ ಸಮಯದಲ್ಲಿ 1 ಮತ್ತು 2ನೇ ಎದುರುದಾರರು ಸಾರ್ವಜನಿಕರಿಗೆ ಉಂಟಾಗುವ ತೊಂದರೆಯ ಹಿನ್ನಲೆಯಲ್ಲಿ ತಾತ್ಕಾಲಿಕವಾಗಿ ಕಟ್ಟಡ ಪರವಾನಗಿಯನ್ನು ಸ್ಥಳೀಯ ಸಂಸ್ಥೆಗಳಿಂದ ಪಡೆಯಲು ಸರ್ಕಾರ ಅನುಮೋದನೆ ನೀಡಿದ್ದರಿಂದ, 1 ಮತ್ತು 2ನೇ ಎದುರುದಾರರು ಮಹಾ ಯೋಜನೆಯು ತಯಾರಾಗದೇ ಇರುವ ಅವಧಿಯಲ್ಲಿ ಕರ್ನಾಟಕ ಸರ್ಕಾರ ಸಂಖ್ಯೆ: ನಅಇ 531 ಮೈಅಪ್ರಾ 2012, ದಿನಾಂಕ: 03/10/2012 ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸ ಸೌಧದ ನಿರ್ದೇಶನದಂತೆ 1 ಮತ್ತು 2ನೇ ಎದುರುದಾರರು ಕಟ್ಟಡ ಪರವಾನಗಿ ನೀಡುವ ಪ್ರದತ್ತವಾದ ಅಧಿಕಾರ ಹೊಂದಿದ್ದು, ಅದಕ್ಕೆ ಅನುಗುಣವಾಗಿ ಅವರು ಕರ್ತವ್ಯ ನಿರ್ವಹಿಸಿದ್ದಾರೆ ಎನ್ನುವುದು ದಾಖಲೆಗಳಿಂದ ಕಂಡುಬರುತ್ತದೆ. ಹೀಗಾಗಿ 1 ಮತ್ತು 2ನೇ ಎದುರುದಾರರು ದೂರುದಾರರ ಆಪಾದಿಸಿದಂತೆ ಮೂಡಬಿದ್ರೆ ಪಟ್ಟಣದಲ್ಲಿ ಬೇಕಾಬಿಟ್ಟಿಯಾಗಿ ಕಟ್ಟಡ ಪರವಾನಗಿ ನೀಡಿದ್ದಾರೆ ಹಾಗೂ ನಿಯಮ ಮೀರಿ ಕಟ್ಟಿರುವ ಕಟ್ಟಡದ ವಿರುದ್ಧ ಕ್ರಮ ಕೈಗೊಂಡಿಲ್ಲವೆಂದು ಮಾಡಿರುವ ಆಪಾದನೆಗೆ ಸೂಕ್ತ ಸಾಕ್ಷ್ಯಾಧಾರಗಳನ್ನು ಒದಗಿಸಿಲ್ಲ. ಅಂದರೆ 1 ಮತ್ತು 2ನೇ ಎದುರುದಾರರು ತಮ್ಮ ಕರ್ತವ್ಯದ ಅವಧಿಯಲ್ಲಿ ಯಾವ ಯಾವ ವ್ಯಕ್ತಿಗಳಿಗೆ ನಿಯಮ ಮೀರಿ ಲೈಸನ್ಸ್ ನೀಡಿದ್ದಾರೆ ಹಾಗೂ ಲೈಸನ್ಸ್ ಪಡೆದ ಯಾವ ಯಾವ ವ್ಯಕ್ತಿಗಳು ನಿಯಮ ಮೀರಿ ಕಟ್ಟಡಗಳನ್ನು ಕಟ್ಟಿದ್ದಾರೆ ಮತ್ತು ಯಾವ ವರ್ಷಗಳಲ್ಲಿ ಈ ಘಟನೆಗಳು ಜರುಗಿವೆ ಎನ್ನುವ ಬಗ್ಗೆ ದೂರುದಾರರು ಸೂಕ್ತ ದಾಖಲೆ ಅಥವಾ ವಿವರಗಳನ್ನು ಒದಗಿಸಿಲ್ಲ. ಆದ್ದರಿಂದ, 1 ರಿಂದ 5ನೇ ಎದುರುದಾರರ ವಿರುದ್ಧ ದೂರುದಾರರು ಆರೋಪ ಮಾಡಿದಂತೆ ಅವರು ಕರ್ತವ್ಯ ಲೋಪ ಎಸಗಿದ್ದಾರೆಂದು ಅಭಿಪ್ರಾಯ ಪಡಲು ಮೇಲ್ನೋಟಕ್ಕೆ ಕಂಡುಬರುವುದಿಲ್ಲ. ಆದ್ದರಿಂದ, ಅವರ ವಿರುದ್ಧ ಇರುವ ಆರೋಪವನ್ನು ಮುಕ್ತಾಯ ಮಾಡುವುದು ಸಮಂಜಸವಾಗುತ್ತದೆಂದು ಅಭಿಪ್ರಾಯಿಸುತ್ತೇನೆ.

14. ದೂರುದಾರರು ಆಪಾದಿಸಿದಂತೆ ಮೂಡಬಿದ್ರೆ ಪುರಸಭೆ ವ್ಯಾಪ್ತಿಗೆ ಮಹಾ ಯೋಜನೆಯನ್ನು ತಯಾರಿಸುವ ಜವಾಬ್ದಾರಿಯನ್ನು 3 ರಿಂದ 5ನೇ ಎದುರುದಾರರು ಆಯಾ ಕಾಲಕ್ಕೆ ನಿರ್ವಹಿಸಿದ್ದಾರೆ, ಹಾಗೂ ಅವರ ಆಕ್ಷೇಪಣೆಗಳಿಂದ ಈಗಾಗಲೇ ಮಹಾ ಯೋಜನೆಯ ವರದಿ ತಯಾರಾಗಿದ್ದು, ಸರ್ಕಾರಕ್ಕೆ ಸಲ್ಲಿಸಲಾಗುವುದೆಂದು ಆಕ್ಷೇಪಣೆಗಳಲ್ಲಿ ತಿಳಿಸಿದ್ದಾರೆ. ಆದರೆ, ಇಲ್ಲಿಯವರೆಗೆ ಮಹಾ ಯೋಜನೆಯ ವರದಿ ತಯಾರು ಮಾಡಿ ಸರ್ಕಾರಕ್ಕೆ ಕಳುಹಿಸಿದ ಬಗ್ಗೆ ಯಾವುದೇ ರೀತಿಯ ಮಾಹಿತಿಯನ್ನು ನೀಡಿಲ್ಲ.

15. ಆದ್ದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, 5ನೇ ಎದುರುದಾರರ ಸಕ್ಷಮ ಪ್ರಾಧಿಕಾರದವರಿಗೆ, ಮೂಡಬಿದ್ರೆ ಪಟ್ಟಣದ ಮಹಾಯೋಜನೆಯ ವರದಿಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಸಲ್ಲಿಸಲು ಸೂಕ್ತ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

16. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

8/11

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**